ನೀರ ಬಿಟ್ಕಣಿರು. ಬಾಯೊಳಿಕೆ ಬರ ನೀರಿಗಿಂತ ಚರಂಡಿ ಸೇರ್ತಿದ್ದುದೆ ಹೆಚ್ಚು. ಕುಡ್ದು ಎದೆಳ ಹೊತ್ತಿಗೆ ಬಟ್ಟೆಲ್ಲ ನೆಂದ್ಹೋಗಿರವು. ಈ ಸರ್ಕಸ್ಸಿನಾಟದಲ್ಲಿ ಹೆಸರು 'ಟಿಪ್ಪು' ಆದರೂ ರಿಯಾಯಿತಿ ಏನಿರಲಿಲ್ಲ.

ಟಿಪ್ಪು ಐದ್ನೆ ಕ್ಲಾಸಿಗೆ ಬಂದಾಗ, ಆ ವರ್ಷ ತನ್ನ ಜೊತೆ ಓದ್ತಿದ್ದ ಹಟ್ಟಿಯ ಎಲ್ಲ ಹುಡುಗ್ರಿಗು ತಲಾ ಮುನ್ನೂರು ರುಪಾಯಿ ಸ್ಕಾಲರ್ಷಿಪ್ ಬಂತು. ಅದೇ ಆಸೆ ಮೇರೆಗೆ ಬಂದ ನಂಜವ್ವಂಗೆ ಮೇಷ್ಟ್ರು 'ನಾನು ಕಳ್ಸದ ಕಳ್ಸಿದಿನಿ ಕಣಮ್ಮ, ಅದ್ಯಾಕ ಟಿಪ್ಪುಗೆ ಮಾತ್ರ ಬಂದಿಲ್ಲ. ಹೋಗಿ ಸಮಾಜ ಕಲ್ಯಾಣ ಇಲಾಖೆಲಿ ವಿಚಾರುಸ್ಬೇಕು' ಅಂದ್ರು. ಮಕ ಸಪ್ಪಗೆ ಮಾಡ್ಕೆಂಡು ಮನಿಗೆ ಬಂದ ನಂಜವ್ವ ತನ್ನ ಗಂಡ ಕುಲ್ವಾಡಿ ತಿಮ್ಮಯ್ಯಂಗೆ ಇಂಗಿಂಗೆ ಇತರ್ಕಿತರ ಅಂತ ಹೇಳಿ ಕಳ್ಸಿಳು. ಒಲ್ಲದ ಮನಸ್ಸಿನಿಂದಲೆ ಅಪರೂಪಕ್ಕೊಂದ ಬಿಳಿ ಲುಂಗಿ ಸುತ್ಕೆಂಡು ಹಿರಿಯೂರ ತುಳಿದ ತಿಮ್ಮಯ್ಯ ಸಮಾಜ ಕಲ್ಯಾಣ ಇಲಾಖೆಲಿ ಕೇಳಲಾಗಿ. ಏನ್ ಹೆಸ್ರು ಅಂದ. 'ತಿಪ್ಪೇಸು' ಸಾಮಿ ಅಂದ. ಅದೇನ್ ಸರಿಯಾಗಿ ಹೇಳಯ್ಯ ಅಂತ ಎಷ್ಟು ಗದರಿಸಿರುವೇ, ತಿಮ್ಮಯ್ಯನ ಬಾಯಿಗೆ ಮೊಮ್ಮಗನ ಹೆಸರು ಬಂದಂದು ಅಂಗೆಯ. ಕೊನಿಗತ್ತಗೆ ಅರ್ಜಿ ಪೆಂಡಿತೆಗೆದು ಇದ, ಇದ ಎಂದು ಒಂದೊದ್ನೆ ತಿರುವತೊಡಗಿದ. ಯಾವುದೂ ಅಲ್ಲವೆನ್ನುತ್ತಿದ್ದ ತಿಮ್ಮಯ್ಯ ಮೇಲೆ ಅಂಟಿಸಿದ್ದ ಫೋಟದ ಆಧಾರದ ಮೇಲೆ ಒಂದನ್ನ ನೋಡಿ ಇದೆ ಸಾಮಿ ನನ್ ಮೊಮ್ಮಗುಂದು ಅಂದ. ಹೆಸರು ನೋಡಲಾಗಿ 'ಯೊ ಟಿಪ್ಪು ಸುಲ್ತಾನ್ ಇದು ಇಲ್ಲಿಗೆ ಬರಲ್ಲ ಕಣಯ್ಯ, ಅಲ್ಪ ಸಂಖ್ಯಾತರ ಇಲಾಖೆಗೆ ಹೋಗ್ಬೇಕು. ಅಲ್ಲಿಗೆ ಕೊಡ ಅರ್ಜಿನ ಇಲ್ಲಿ ಕೊಟ್ಟು ಬರ್ಲಿಲ್ಲ ಬರ್ಲಿಲ್ಲ ಅಂದ್ರೆ ಯಂಗೆ ಬರುತ್ತಯ್ಯ' ಜೋರು ಮಾಡಿದ. 'ಅದೆಲ್ಲೈತೆ ಸಾಮಿ' ಕೇಳಿದ. ಇರತ ಐತೆ ಅಂದ ಕ್ಲರ್ಕಿಗೆ ಯಾಕೊ ಡೌಟ್ ಹೊಡೆದು 'ಏನ್ ನಿನ್ನ ಹೆಸ್ರು' ಕೇಳಿದ. 'ತಿಮ್ಮಯ್ಯ ಸಾಮಿ, ಕುಲ್ವಾಡಿ ತಿಮ್ಮಯ್ಯ' ಎಂದ. ಆಶ್ಚರ್ಯ ಪಡುವ ಸರ್ದಿ ಕ್ಲರ್ಕಿನದು. ಮತ್ತೆ ಅವ್ವ ಅಪ್ಪನ ಹೆಸರೇನಾರ ಬೆರ್ಕೆ ಆಗೈತ ಅಂತ ಕ್ರಾಸ್ ಚೆಕ್ ಮಾಡಿದ. ಇಲ್ಲ. ಅದೆಲ್ಲ ಸರಿ ಕಂಡು ಬಂದ್ಮೇಲೆ ಆತ ಜಾತಿ ಕಾಲಂ ನೋಡಿದ. ಅಲ್ಲು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಎಂದೇ ಬರೆಯಲಾಗಿದೆ. ಪೇಚಿಗೆ ಸಿಕ್ಕಿದ ಕ್ಲರ್ಕು ತನ್ನದೇನೂ ತಪ್ಪಿಲ್ಲ ಎಂದು ಸಮರ್ಥಿಸಿಕೊಳ್ಳಲು ಅಕ್ಕ ಪಕ್ಕದ ಟೇಬಲ್ಲಿನಲ್ಲಿದ್ದ ಇತರ ಗುಮಾಸ್ತರನ್ನೂ ತನ್ನ ಟೇಬಲ್‌ಗೆ ಕರೆದು ಕೀಟಲೆ ಮಾಡುತ್ತ ಪಂಚಾಯ್ತಿಗಿಕ್ಕಿಕೊಂಡ. ಇದರಿಂದ ಕುಲ್ವಾಡಿ ತಿಮ್ಮಯ್ಯನಿಗೆ ಮೊದಲ ಬಾರಿಗೆ ಮೊಮ್ಮಗನ ಹೆಸರ ಮೇಲೆ ತಾತ್ಸಾರ ಬಂದು, 'ಇವ್ನಯ್ಯುನು ಗುಂಜ್ನಾಕ್ಯಾಯ, ಇವ್ರಪ್ಪುಗೆ ಬೇರೆ ಹೆಸ್ರೆ ಇರ್ಲಿಲ್ವ ಕಟ್ಟಕೆ' ಅಂತ ಮನದಲ್ಲೆ ಬೈದುಕೊಂಡು 'ಈಗೇನ್ ಮಾಡದು ಸಾಮಿ' ಕೇಳಿದ. 'ಈ ವರ್ಷುದ್ದು ಮುಗಿತು ಇನ್ನೇನಿದ್ರು ಮುಂದಿನೊರ್ಷ ನೋಡನ ಹೋಗು' ಎಂದು ಬೀಳ್ಕೊಟ್ಟರು.

ಮನಿಗೆ ಬಂದ ಕುಲ್ವಾಡಿ ತಿಮ್ಮಯ್ಯ, ಒಂದು ವರ್ಷದ ಮಟ್ಟಿಗೆ ಅಂತ ಮಗುನ್ನ ಕಳಿಸಿ ಇತ್ತ ಐದ್ನೇ ಕ್ಲಾಸಿಗೆ ಬಂದ್ರುವೆ 'ಇಲ್ಲೆ ಒಂದ್ಕೆಂಡವ್ನೆ ಓದ್ಲಿತಗ' ಅಂತ ಇನ್ನೊಂದು ಮತ್ತೊಂದು ಮಕ್ಳು ಮಾಡ್ಕೆಂತಿದ್ದ ಅಳಿಯ ದೇವ್ರಿಗೆ ಫೋನ್ ಮಾಡಿ 'ಅದೆಂತ ಹೆಸ್ರಿಕ್ಕಿದಿಯಪ್ಪ ನಿನ್ ಮಗುಂಗೆ, ಎಲ್ಲರು ಆಡ್ಕೆಣರೆ ಆದ್ರು' ಎಂದು ಪ್ರಾರಂಭಿಸಿ ನಡೆದುದ್ನೆಲ್ಲ ಹೇಳಿದ. 'ಅದೇನನ ಆಗ್ಲಿ ಅವ್ರು ಕೊಡ ಪುಟ್ಕೋಸಿ ಕಾಲಕ್‌ಶಿಪ್ಪು ಬ್ಯಾಡ ಯಾವಳು ಬ್ಯಾಡ ಯಂಥ ಒಳ್ಳೆ ಹೆಸ್ರು, ಅದೆ ಇರ್ಲಿ' ಎಂದು ಮೀಸೆ ತಿರುವಿದ.

ಟಿಪ್ಪು ಏಳ್ನೇ ಕ್ಲಾಸ್ ಪಾಸ್ ಮಾಡತಕ ಹೆಂಗೋ ಅಂಗೆ ನೆಡ್ಕಂಡು ಹೋತು. ಸ್ಕೂಲಿನ ಇತರರಿಗಿಂತ ಏನ್

